ಆ ಹಾಗಿದ್ದಲ್ಲಿ, ದಾನಿಗಳ ಧ್ಯೇಯೋದ್ದೇಶಕ್ಕೆ ವಿರುದ್ಧವಾಗಿ ಆಸ್ಪತ್ರೆ ಮುಚ್ಚಿರುವುದು ನಿಜವೇ?

1975ರಲ್ಲಿ ಮಳವಳ್ಳಿ ಚಿಕ್ಕಣ್ಣ ಚಾರಿಟೀಸ್‌ರವರು ಆಸ್ಪತ್ರೆ ನಡೆಸಲು ಕಟ್ಟಡ ಮತ್ತು ಜಮೀನು ದಾನವಾಗಿ ನೀಡಿದ್ದು 2006ರ ವರೆಗೆ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, ತದನಂತರ ಹೊರ ರೋಗಿಗಳ ಸಂಖ್ಯೆ ಕಡಿಮೆ ಇದ್ದುದರಿಂದ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಸ್ಥಳಾಂತರಿಸುವಂತೆ ತೀರ್ಮಾನಿಸಿ ಸದರಿ ಆಸ್ಪತ್ರೆಯನ್ನು ದೊಡ್ಡಕನ್ನೆಳ್ಳಿ ಗ್ರಾಮ ಬೆಂ.ಪೂರ್ವ ತಾ॥. ಇಲ್ಲಿಗೆ ಸ್ಥಳಾಂತರಿಸಲಾಗಿದೆ.
ಆದುದರಿಂದ ಸದರಿ ಆಸ್ಪತ್ರೆಯನ್ನು ಮುಚ್ಚಲಾಗಿದೆ.

ಇ ಈ ಆಸ್ಪತ್ರೆಯನ್ನು ಮುಚ್ಚುವಾಗ ಟ್ರಸ್ಟಿನ ಗಮನಕ್ಕೆ ತರಲಾಗಿದೆಯೇ?

ಟ್ರಸ್ಟಿಗಳ ಗಮನಕ್ಕೆ ತಂದಿರುವುದಿಲ್ಲ ಆದರೆ ಜಿಲ್ಲಾ ಪಂಚಾಯಿತಿಯ ಸಭೆಯ ನಡವಳಿಗಳನ್ವಯ ಸರ್ಕಾರವು ಗ್ರಾಮೀಣ ಪ್ರದೇಶಕ್ಕೆ ಸ್ಥಳಾಂತರಿಸಿದೆ.

ಈ ದಾನಿಗಳ ಧ್ಯೇಯೋದ್ದೇಶದಂತೆ ಆಸ್ಪತ್ರೆಯನ್ನು ಮರು ಮಂಜೂರು ಮಾಡಿ ಟ್ರಸ್ಟಿಗೆ ವಹಿಸುವಂತೆ ಟ್ರಸ್ಟಿನವರು ನೀಡಿರುವ ಮನವಿ ಸ್ವೀಕೃತವಾಗಿಯೇ?

ಹೌದು ಸ್ವೀಕೃತವಾಗಿರುತ್ತದೆ.

ಉ ಹಾಗಿದ್ದಲ್ಲಿ, ಯಾವಾಗ ಟ್ರಸ್ಟಿಗೆ ವಹಿಸಲಾಗುವುದು?

ಸದರಿ ಕಟ್ಟಡದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮರು ಸ್ಥಾಪಿಸುವ ಕುರಿತಂತೆ ಪರಿಶೀಲನೆಯಲ್ಲಿದೆ.

43 ಶ್ರೀ ರೋಷನ್ ಬೇಗ್. ಆರ್
ಬಿ.ಎನ್. ಬಚ್ಚೇಗೌಡ(ಮಾನ್ಯ ಕಾರ್ಮಿಕ ಸಚಿವರು)

ಅ ಅಸಂಘಟಿತ ವಲಯದ ಕಾನೂನನ್ನು ಸರ್ಕಾರದಿಂದ ಜಾರಿಗೊಳಿಸಲಾಗಿದೆಯೇ;

–ಇಲ್ಲಾ–

ಆ ಹಾಗಿದ್ದಲ್ಲಿ, ಯಾವಾಗ ಜಾರಿಗೊಳಿಸಲಾಗಿದೆ?

ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯಿದೆ 2008ನ್ನು ಈಗಾಗಲೇ ಜಾರಿಗೆ ತಂದಿದ್ದು, ಸದರಿ ಕಾಯಿದೆಗೆ ನಿಯಮಗಳನ್ನು ಕೇಂದ್ರ ಸರ್ಕಾರವು ರೂಪಿಸಬೇಕಾಗಿದೆ. ಕಾಯಿದೆಯ ಕಲಂ 1 [3] ರಲ್ಲಿ ಕೇಂದ್ರ ಸರ್ಕಾರ ತನ್ನ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಕಾನೂನು ಜಾರಿಗೆ ಬರುತ್ತದೆ ಎಂದು ಸೂಚಿಸಲಾಗಿದ್ದು, ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಇನ್ನೂ ಹೊರಡಿಸಿರುವುದಿಲ್ಲ.